ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಅನುಸೂಚಿಗೆ ತಿದ್ದುಪಡಿ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನೆ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆಯ ಸಚಿವರು) :

"1991ನೇ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ 1991 ನೇ ಮಲೆನಾಡು ಪ್ರದೇಶಾಭಿವೃದ್ಧಿ ವಿಧೇಯಕವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

2 ಹೈದರಾಬಾದ್ - ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವಿಧೇಯಕ 1991

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಮಾನ್ಯ ಯೋಜನಾ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿತ ಇಲಾಖೆಯ ಸಚಿವರು : "ಹೈದರಾಬಾದ್-ಕರ್ನಾಟಕ ಪ್ರದೇಶಭಿವೃದ್ಧಿ ಮಂಡಳಿ ವಿಧೇಯಕ 199ಐನ್ನು ಪರ್ಯಾಲೋಚನೆ ಬೇಕೆಂದು ಸೂಚಿಸುದ್ದೇನೆ"(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಈ ಮಸೂದೆಯನ್ನು ಎಲ್ಲಾ ಪ್ರತಿಪಕ್ಷಗಳ ಪರವಾಗಿ ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇದಕ್ಕಾಗಿ ಅಭಿನಂದನೆಗಳು

ಶ್ರೀ ಆರ್.ಎಲ್. ಜಾಲಪ್ಪ : ಇದರ ಮೇಲೆ ಭಾಷಣ ಮಾಡುವುದಕ್ಕೆ ನಾಳೆ ತೆಗೆದುಕೊಳ್ಳೋಣ

(ಗೊಂದಲ)

ಉಪಾಧ್ಯಕ್ಷಿಣಿಯವರು: ಈಗ ಮಾನ್ಯ ಮರಲ್ ಇಸ್ಲಾಂ ಅವರು ಎರಡು ನಿಮಿಷ ಈ ವಿಧೇಯಕದ ಮೇಲೆ ಮಾತನಾಡುತ್ತಾರೆ.

SHRI QAMARUL ISLAM (GULBARGA) : Madam Deputy Speaker I welcome this historic bill of the Hyderabad-Karnataka Area Development Board Bill. It was the wish of the people when they became intergrated part of Karnataka state in 1956. You know, Hyderabad-Karnataka area has got a very historical background. When Vijayanagar empire was there in Hampi, Bahamanis were ruling Hyderabad-Karnataka. Then we became a part and parcel of the Nizam state. In 1956, when the states Reorganisation took place, at that time Hyderabad- Karnataka districts become the intergral part of Karnataka State. Madam, you know that while discussing on the Malnad Area Development Board Bill, a number of opinions and suggestions have come. While welcoming this Bill, I want to bring out certain facts. In the last ten years, the Karnataka Public Service Commission has recruited

25,000 persons out of which only 500 are from Hyderabad-Karnataka area i.e. 5% only in 10 years. Similarly, in all the recruitments made by the Recruitment Committees, only 3% are recruited from that area. Recently, 180 candidates were recruited for UKP on contract basis, of them only 5 candidates are from the four Districts of Hyderabad-Karnataka and Medical seats we have got only 3%. If you see the list of backwardness, Gulbarga, Raichur & Bidar are in the last i.e. 17th, 18th and 19th, Educationally, economically, industrially, agriculturally and in all respects we are very very backward. We are not on par with the other parts of Karnataka state. Madam, we are proud today that we are Kannadiagas. We want that there should be a united Karnataka. But at the same time we are proud that we are Indians. In India, the States have been divided on linguistic basis.

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ಭಿಕ್ಷೆ ಪಾತ್ರೆ ಹಿಡಿದುಕೊಂಡು ಹೋಗಲಿ

SHRI QAMARUL ISLAM : My friend has spoken on that. In Andhara pradesh Telangana Board is there; Marathwada zone is there we say we have been tolerating injustice. When we say injustice, it does not mean that the people of this area (old Mysore) have done injustice but the people who ruled have done injustice. Mr. Sindhya said, Mr Veerendra Patil was also one of the Chief Ministers from our area. But unfortunately, the political situation was such that even though was from our area, he was not able to do justice. These are the realities. We don't want discrimination. We have already become an integrated part of Karnataka. We will remain integrated part till justice is done by the Government which is ruling, whichever party it may be. Madam, certain realition (Interruptions)

SHRI R.L. JALAPPA : That is why I said we will take up this Bill tomorrow.

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ವಿಕೀಕರಣಕ್ಕೆ ಒಂದು ಇಂಚೂ ಹಿಂದೆ ಹೋಗಬಾರದು

ಉಪಾಧ್ಯಕ್ಷರು: ಅವರು ಈಲ್ಡ್ ಆಗಿಲ್ಲ.

SHRI QAMARUL IRSAM : Certain realities are there.
(INTERRUPTIONS)

MADAM DEPUTY SPEAKER : You speak about the Bill.

SHRI QAMARUL ISLAM : I am appreciating.

ಶ್ರೀ ವಾಟಾಳ್ ನಾಗರಾಜ್ : ಯಾರೂ ಇಲ್ಲಿ ಪರ ವಿರೋಧ ಇಲ್ಲ ನಾವೆಲ್ಲಾ ಒಂದೇ ಎಂದು ಹೇಳಬೇಕು ಅಷ್ಟೆ

SHRI QAMARUL ISLAM : I am not saying that but certain facts are there. The issues of Punjab and Kashmir are not political; they are more economical. Economical injustice should not be there in one State. That is why we are appreciating. this Bill The other people who are advanced compared to our area are also with us. I wel come them we have become an integral part of you. After a long delay this Bill has come. I appreciate the Hon'ble Chief Minister who has taken a bold step. The Government has taken a bold step. Even though we had a Chief Minister for our area he could not able to do it due to political atmosphere. So we welcome this Bill.

ಶ್ರೀ ಬಸವರಾಜ ರಾಯರೆಡ್ಡಿ (ಯಲಬರ್ಗ) : ಈವತ್ತು ಮಾನ್ಯ ಬಂಗಾರಪ್ಪನವರ ನೇತೃತ್ವದ ಸರ್ಕಾರ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ತಂದು ಈ ಭಾಗದ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಟ್ಟು ಒಳ್ಳೆ ಕೆಲಸ ಮಾಡಲಿಕ್ಕೆ ಅನುವು ಮಾಡಿಕೊಟ್ಟಂಥ ಸನ್ಮಾನ್ಯ ಬಂಗಾರಪ್ಪ ಮತ್ತು ಅವರ ಮಂತ್ರಿಮಂಡಳಕ್ಕೆ ಅಭಿನಂದಿಸಿ ಈ ಒಂದು ವಿಧೇಯಕವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇವತ್ತು ಈ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ರಚನೆಯಾಗಬೇಕೆಂದು. ಸುಮಾರು 15-20 ವರ್ಷದಿಂದ ಒತ್ತಾಯ ಇತ್ತು. ಈಗಾಗಲೇ ಮಾನ್ಯ ಸದಸ್ಯರಾದ ಕಮರಲ್ ಇಸ್ಲಾಂ ಅವರು ಮಾತನಾಡಿದರು. ಹೈದರಾಬಾದ್ -ಕರ್ನಾಟಕದ ಮೂರು ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆ ಎಲ್ಲಾ ರಂಗದಲ್ಲೂ ಹಿಂದೆ ಇದೆ. ನಮ್ಮ ಅಂಕಿಸಂಖ್ಯೆಗಳ ಪ್ರಕಾರ 17,18,19,ಮತ್ತು 20ನೇ ರ್ಯಾಂಕ್ ನಮ್ಮದು. ನಿಜಾಮ್ ಕಾಲದಲ್ಲೂ ಕೂಡ ಯಾವುದೇ ರೀತಿಯ ಕೆಲಸ ಆಗಿಲ್ಲ. ಇವತ್ತು ಶೈಕ್ಷಣಿಕ ರಂಗ ತೆಗೆದುಕೊಳ್ಳಿ 53 ಇಂಜಿನೀಯರಿಂಗ್ ಕಾಲೇಜುಗಳು ಇಡೀ ಕರ್ನಾಟಕದಲ್ಲಿದ್ದರೆ ಕೇವಲ 5 ಇಂಜಿನಿಯರಿಂಗ್ ಕಾಲೇಜು ಹೈದರಾಬಾದ್ ಕರ್ನಾಟಕದಲ್ಲಿದೆ. ಎರಡೇ ಎರಡು ಮೆಡಿಕಲ್ ಕಾಲೇಜು ಇದೆ. ಹೀಗೆ ಅ ಅಂಶದ ಪಟ್ಟಿಯನ್ನು ಕೊಡುತ್ತಾ ಹೋದರೆ ಹೈದರಾಬಾದ್ ಕರ್ನಾಟಕ ತ್ಯಂತ ಹಿಂದುಳಿದ ಪ್ರದೇಶ ಎಂಬುದು ಎಲ್ಲರಿಗೂ ಗೊತ್ತಿದೆ. ಎಲ್ಲಾ ಸದಸ್ಯರೂ ಕೂಡ ವಾಟಾಳ್ ನಾಗರಾಜ್ ಅವರಾದಿಯಾಗಿ ಜಾಲಪ್ಪನವರಾದಿಯಾಗಿ ಒಪ್ಪಿಗೆ ಕೊಟ್ಟಿದ್ದಾರೆ. ಸ್ವಾಗತ ಮಾಡಿದ್ದಾರೆ. ಮತ್ತು ಅವರಿಗೂ ಮತ್ತು ಆ ಭಾಗದ ಸದಸ್ಯರು ಸರ್ವಾನುಮತದಿಂದ ಮಾಡಲಿಕ್ಕೆ ಏನು ಒಪ್ಪಿಗೆ ಕೊಟ್ಟಿದ್ದಾರೆ. ಅದಕ್ಕೆ ಅವರಿಗೆ ಕೂಡ ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುತ್ತೇನೆ. ಏನು ಅಭಿವೃದ್ಧಿ ಮಂಡಳಿ ರಚನೆ ಮಾಡಿದ್ದೀರಿ. ಇದಕ್ಕೆ ಹೆಚ್ಚಿನ ಹಣಕಾಸಿನ ನೆರವನ್ನು ನಮ್ಮ ಭಾಗಕ್ಕೆ ಕೊಡಬೇಕು. ಹಣಕಾಸಿನ ದೃಷ್ಟಿಯಲ್ಲಿ ಒಂದೇ ಮಾತು ಹೇಳುತ್ತೇನೆ. ಕೇಂದ್ರ ಸರ್ಕಾರ ಇದಕ್ಕೆ ಹಣಕಾಸು ಕೊಡುತ್ತಿಲ್ಲ. ಕೆಲವು ರಾಜ್ಯ [illegible] ಹಣ ಕೊಡುತ್ತಿದೆ. ಕೇಂದ್ರಸರ್ಕಾರದಿಂದ ಕೊನೇ ಪಕ್ಷ 50 ಪರ್ಸೆಂಟ್ ಹಣವನ್ನಾದರೂ ಈ ಯೋಜನೆಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಇಲ್ಲದೇ [illegible]ರೆ

ದಯವಿಟ್ಟು ಇರಿಗೇಷನ್ ಬಾಂಡ್ ಅನ್ನು ನೀರಾವರಿ ಯೋಜನೆಗೋಸ್ಕರ ತರಬೇಕೆಂದು ಏನು ಯೋಚನೆ ಮಾಡಿದ್ದೀರಿ. ಅದೇ ರೀತಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿಗಾಗಿ ಒಂದು ಬಾಂಡನ್ನು ಮಾಡಬೇಕು ಈ ವಿಧೇಯಕದಲ್ಲಿ ಕರ್ನಾಟಕ ಸರ್ಕಾರದ ಸಾಲ ತೆಗೆದುಕೊಳ್ಳುವುದಕ್ಕೆ ಏನು ಹೇಳಿದ್ದೀರಿ ಈ ಸಾಲ ತೆಗೆದುಕೊಳ್ಳುವುದರ ಜೊತೆಗೆ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಲಿ ಬಾಂಡ್ ಮಾಡಿ. ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ ಆದಾಯ ತೆರಿಗೆ ಮತ್ತು ಸಂಪತ್ತು ತೆರಿಗೆಯಿಂದ ವಿನಾಯಿತಿ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟರೆ ಹೆಚ್ಚು ಜನ ಬಾಂಡ್‌ಗಳನ್ನು ಖರೀಡಿ ಮಾಡುತ್ತಾರೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರ ಜೊತೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆಂದು ನಾನು ಭಾವಿಸುತ್ತೇನೆ. ಕೊನೆಯದಾಗಿ ಒಂದು ಮಾತು ಹೇಳುತ್ತೇನೆ ಈ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಲಿಯನ್ನು ಶಾಸನಬದ್ಧವಾಗಿ ಮಾಡಲಿಕ್ಕೆ ಬಂಗಾರಪ್ಪನವರು ಕಾರಣಕರ್ತರಾಗಿರಬಹುದು. ಅದರ ಜೊತೆಗೆ ೧೯೭೨ರಲ್ಲಿ ಹಿಂದೆ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದರು ಆ ಸಮಯದಲ್ಲಿ ಈ ಭಾಗಕ್ಕೆ ಅಭಿವೃದ್ಧಿ ಮಂಡಳಿ ರಚನೆ ಮಾಡುವ ಅವಶ್ಯಕತೆ ಇದೆ ಎಂದು ಈಗ ಗೃಹಸಚಿವರಾಗಿರುವ ಧರ್ಮಸಿಂಗ್ ಅವರು ಮತ್ತು ನಗಾರಾಭಿವೃದ್ಧಿ ಸಚಿವರಾಗಿದ್ದಾಗ ಅವರ ನೇತೃತ್ವದಲ್ಲಿ ಒಂದು ಮಂಡಳಿ ರಚನೆ ಮಾಡಿ ಪ್ರತಿಯೊಂದು ಅಂಕಿಸಂಖ್ಯೆಗಳ ವಿವರಣೆ ಕೊಟ್ಟಿದ್ದಾರೆ. ಆ ಒಂದು ಸಮಿತಿ ವರದಿಯನ್ನು ಮುಂದೆ ಅನುಷ್ಟಾನಕ್ಕೆ ತರುವುದಕ್ಕೆ ಆಗಲಿಲ್ಲ. ಆದರೂ ಕೂಡಾ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಜನತಾ ದಳ ಸರ್ಕಾರ ಇದ್ದಾಗ ಮಾನ್ಯ ಬೊಮ್ಮಾಯಿಯವರ ಸರ್ಕಾರದ 1988-89ನೇ ಸಾಲಿನ ಆಯವ್ಯಯ ಪಟ್ಟಿಯನ್ನು ತೆಗೆದುನೋಡಿ. ಅದರಲ್ಲಿ ಮಾನ್ಯ ಬೊಮ್ಮಾಯಿಯವರು ಈ ಮಂಡಲಿ ರಚನೆ ಮಾಡುವ ಬಗ್ಗೆ 4 ಕೋಟಿ ರೂಪಾಯಿಯನ್ನು ಕೊಟ್ಟು ಪ್ರಾರಂಭ ಮಾಡಿದ್ದರು. ನಂತರ ಮಾನ್ಯ ವೀರೇಂದ್ರ ಪಾಟೀಲರು ಬಂದು 60 ಕೋಟಿ ರೂಪಾಯಿ ಕೊಟ್ಟಿದ್ದರಿಂದ ಇದಕ್ಕೆ ಚಲಾವಣೆಗೆ ಸಿಕ್ಕಿತು. ಈಗ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಇದಕ್ಕೆ ಒಂದು ಶಾಸನಬದ್ಧ ಸ್ವರೂಪವನ್ನು ಕೊಟ್ಟಿರುವುದಕ್ಕೆ ಎಲ್ಲಾ ಮಹನೀಯರಿಗೂ ಹೈದರಾಬಾದ್-ಕರ್ನಾಟಕ ಜನರು ಋಣಿಗಳಾಗಿರುತ್ತಾರೆ. ಈ ಎಲ್ಲಾ ಮಹನೀಯರಿಗೂ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಣೆಯವರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಡಾ ಎ.ಬಿ. ಮಲ್ಲಕರೆಡ್ಡಿ (ಯಾದಗಿರ್) : ಸನ್ಮಾನ್ಯ ಅಧ್ಯಕ್ಷಿಣಿಯವರೇ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಲಿ ಎಂಬ ವಿಧೇಯಕವನ್ನು ಸ್ವಾಗತಿಸಲು ನನಗೆ ಬಹಳ ಸಂತೋಷವಾಗುತ್ತದೆ. ಸಂತೋಷದ ಜೊತೆಗೆ ಅಭಿಮಾನ ಕೂಡಾ ಎನಿಸುತ್ತದೆ. ಕಾರಣ ನನ್ನ ಪಕ್ಷದ ಸರ್ಕಾರ ಈ ಒಂದು ಮಸೂದೆಯನ್ನು ತಂದಿದೆ ಅದಕ್ಕಾಗಿ ಕಾಂಗ್ರೆಸ್ ಪಕ್ಷದ ಶಾಸಕನಾದ ನನಗೆ ನಮ್ಮ ಪಕ್ಷದ ಸರ್ಕಾರ ಇಂತಹ ಉತ್ತಮ ಕಾರ್ಯಕ್ರಮ ತೆಗೆದು ಕೊಂಡಿದೆ ಎಂದು ಸಂತೋಷವಾಗಿದೆ. ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿಯ ಚಿಂತನೆ ಸುಮಾರು 1980ನೇ ಇಸವಿಯಿಂದ ನಡೆಯುತ್ತಿದೆ. ಆದರೆ ಇದಕ್ಕೆ ಒಂದು ಶಾಸನ ಸ್ವರೂಪ ಕೊಡಬೇಕೆಂಬ ರಾಜಕೀಯವಾಗಿ ಬಹಳ ಕ್ಲಿಷ್ಟ ವಿಷಯವಾಗಿತ್ತು. ಇಂತಹ ಕ್ಲಿಷ್ಟ ಎಂದ ಪರಿಸ್ಥಿತಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಅವರ ಮಂತ್ರಿಮಂಡಲದ ಎಲ್ಲಾ ಸಹೋದ್ಯೋಗಿಗಳನ್ನು ಶಾಸಕರನ್ನು ವಿಶ್ವಾಸಕ್ಕೆ

ತೆಗೆದುಕೊಂಡು ಇಂತಹ ಉತ್ತಮವಾದ ಮಸೂದೆಯನ್ನು ಇಟ್ಟಿದ್ದಾರೆ. ಇದರ ಜೊತೆಗೆ ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ಕೂಡಾ ಈ ಸದನದ ಸ್ವೀಕೃತಿಗಾಗಿ ಮಂಡಿಸಿದ್ದು ಸದನ ಸ್ವೀಕರಿಸುತ್ತದೆಂದು ನನಗನ್ನಿಸುತ್ತದೆ. ಇವತ್ತು ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಸೂದೆ ಈ ಸಭೆಯಲ್ಲಿ ಸರ್ವಾನುಮತದಿಂದ ಸ್ವೀಕೃತ ಆಗುತ್ತದೆಂಬ ವಿಶ್ವಾಸವನ್ನು ನಾನು ಇಟ್ಟಿದ್ದೇನೆ. ನಾನು ಈ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಬಯಸುವುದಿಲ್ಲ, ಏಕೆಂದರೆ ಯಾವ ಭಾಗದಿಂದ ವಿರೋಧ ಬರಬೇಕಾಗಿತ್ತೋ ಆ ಭಾಗದಿಂದ ವಿರೋಧ ಬಂದಿಲ್ಲ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬಗ್ಗೆ ಯಾವ ರೀತಿಯ ವಿವಾದ ಇಲ್ಲ. ಎಲ್ಲರೂ ಸ್ವಾಗತ ಮಾಡಿದ್ದಾರೆ. ಆದರೆ ಮಲೆನಾಡು ಅಭಿವೃದ್ಧಿ ಬಗ್ಗೆ ಸ್ವಲ್ಪ ಚರ್ಚೆ ಬಂದಿದೆ. ಕೆಲವರು ಕೆಲವೊಂದು ಭಾಗವನ್ನು ಸೇರಿಸಬೇಕೆಂದು ಹೇಳಿದ್ದಾರೆ. ಅದನ್ನು ಸರಿಪಡಿಸಬಹುದು. ಆದರೆ ಇದಕ್ಕೆ ಮಾತ್ರ ಯಾವ ವಾದ ಇಲ್ಲ. ಅದಕ್ಕಾಗಿ ನಾನು ಬಹಳ ಸಂತೋಷದಿಂದ ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ಮತ್ತು ಶಾಸಕನಾಗಿ ಜನರ ಪ್ರತಿನಿಧಿಯಾಗಿ ಮಾನ್ಯ ಬಂಗಾರಪ್ಪನರ ನೇತೃತ್ವದ ಸರ್ಕಾರಕ್ಕೆ ಆ ಭಾಗದ ಜನರ ಪರವಾಗಿ ಧನ್ಯವಾದಗಳನ್ನು ಕೃತಜ್ಞತೆಗಳನ್ನು ಹೇಳಿ ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಸನ್ಮಾನ್ಯ ಉಪಾಧ್ಯಕ್ಷೀಣಿಯವರೇ ಪ್ರಥಮ ಭಾರಿಗೆ ಕರ್ನಾಟಕ ವಿಧಾನಸಬೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವಿಧೇಯಕ 1991 ವನ್ನು ಸ್ವಾಗತಿಸಿ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಇದು ನಮ್ಮ ಹೈದರಾಬಾದ್-ಕರ್ನಾಟಕ ಭಾಗದ ಬೀದರ್ ಕುಲ್ಬರ್ಗ ರಾಯಚೂರು ಮತ್ತು ಬಳ್ಳಾರಿ ಈ ನಾಲ್ಕು ಜಿಲ್ಲೆಗಳ ಜನರ ಬಹಳ ದಿನಗಳ ಒಂದು ಬೇಡಿಕೆ ಇತ್ತು. ಹೈದರಾಬಾದ್-ಕರ್ನಾಟಕ ಹಿಂದುಳಿದ ಪ್ರದೇಶ ಇದು ನಮ್ಮ ಕರ್ನಾಟಕ ರಾಜ್ಯದ ರಾಜಧಾನಿಗೆ ಬಹಳ ದೂರವಾದ ಪ್ರದೇಶವಾಗಿದ್ದು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಗಡಿಯಲ್ಲಿ ಇರುವ ಈ ಜಿಲ್ಲೆಗಳ ಅಭಿವೃದ್ಧಿಗೋಸ್ಕರವಾಗಿ ಒಂದು ಮಂಡಲಿಯನ್ನು ರಚನೆ ಮಾಡಬೇಕೆನ್ನುವ ವಿಚಾರ ಬಹಳ ದಿವಸಗಳಿಂದ ಇತ್ತು. ಈ ಒಂದು ಸಂಧರ್ಬದಲ್ಲಿ ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರಿಗೂ ಹಾಗೂ ನಮ್ಮ ಯೋಜನಾ ಮಂತ್ರಿಗಳಾದ ಶ್ರೀಮತಿ ನಾಗರತ್ನಮ್ಮನವರಿಗೂ ಹೈದರಾಬಾದ್-ಕರ್ನಾಟಕ ಭಾಗದ ಜನರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸ ಬಯಸುತ್ತೇನೆ. ಈ ಹಿಂದುಳಿದಿರುವಿಕೆಗೂ ಕೆಲವು ಕಾರಣಗಳು ಇವೆ. ಈಗಾಗಲೇ ಹಲವಾರು ಮಾನ್ಯ ಸದಸ್ಯರು ಈ ಭಾಗ ಹಿಂದುಳಿದಿರುವಿಕೆಯ ಬಗ್ಗೆ ಹೆಳಿದ್ದಾರೆ. 7.40 ಪಿ.ಎಂ

ತಾವು ನಿಜವಾದ ಒಂದು ದೃಷ್ಟಿಯಲ್ಲಿ ಅಳತೆ ಮಾಡಿಕೊಂಡು ನೋಡಿದಾಗ ಹೈದರಾಬಾದ್-ಕರ್ನಾಟಕ ನಮ್ಮ ಭಾಗ ಎಲ್ಲಾ ರಂಗಗಳಲ್ಲಿ ಹಿಂದೆ ಬಿದ್ದಿರುವಂತಹದ್ದು ಸರ್ಕಾರದ ಅಂಕಿಸಂಖ್ಯೆಗಳಿಂದ ನಮಗೆ ಸ್ಪಷ್ಟವಾಗಿ ಗುರುತು ಆಗುತ್ತದೆ. ಹಿಂದೆ ಬಿದ್ದಂತಹ ಭಾಗಗಳ ಅಬಿವೃದ್ಧಿಗೋಸ್ಕರ ನಾವು ಶಾಸನಬದ್ಧವಾಗಿ ಒಂದು ಮಂಡಳಿಯನ್ನು ರಚನೆ ಮಾಡಬೇಕೆಂದು ಹಲವಾರು ಜನರ ಹಂಬಲ ಮತ್ತು ಬಯಕೆ ಇತ್ತು. ಹಿಂದೆ ಮಾನ್ಯ ಧರ್ಮಸಿಂಗ್‌ರವರು ಗುಂಡೂರಾಯರ ಮಂತ್ರಿಮಂಡಲದಲ್ಲಿದ್ದಂತಹ ಸಂದರ್ಭದಲ್ಲಿ ಗುಲ್ಬರ್ಗದಲ್ಲಿ ಒಂದು ಕ್ಯಾಬಿನೆಟ್ ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಯಿತು. ಅದು

ಆದಮೇಲೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಶ್ರೀಮಾನ್ ಬೊಮ್ಮಾಯಿಯವರು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಿದರು. ಅದೇ ಪ್ರಕಾರವಾಗಿ ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ರಾಮಕೃಷ್ಣಹೆಗಡೆಯವರು ಕೇಂದ್ರದಲ್ಲಿ ಡೆಪ್ಯೂಟಿ ಛೇರ್‌ಮೆನ್ ಪ್ಲಾನಿಂಗ್ ಕಮೀಷನ್ ನ್ನಲ್ಲಿದ್ದಾಗ ಅವರು ಇದಕ್ಕೆ 50 ಕೋಟಿ ರೂಪಾಯಿ ಮಂಜೂರು ಮಾಡಿಕೊಟ್ಟು ಆ ಭಾಗದ ಅಭಿವೃದ್ಧಿಗೋಸ್ಕರ ಕೇಂದ್ರದ ಮಂಜೂರಾತಿಯನ್ನು ಮಾಡಿಸಿದ್ದರು. ಮಾನ್ಯ ವೀರೇಂದ್ರ ಪಾಟೀಲ್‌ರವರಿಗೆ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಹಾಗೂ ಮಾನ್ಯ ಧರ್ಮಸಿಂಗ್‌ರವರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸದಿದ್ದರೆ ತಪ್ಪಾಗುತ್ತದೆ. ಅವರು ಈ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಡಿದ್ದಾರೆ. ನನ್ನ ಮನಸ್ಸಿನಲ್ಲಿ ಬರುವ ವಿಚಾರಗಳನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಶಾಸನಬದ್ಧವಾದ ಮಂಡಳಿ ರಚನೆಯಾಗಬೇಕು. ಹಲವಾರು ದಿನಗಳಿಂದ ಹೋರಾಟಗಳು ಅಲ್ಲದೆ ಹಲವಾರು ಸಭೆ ಸಮಾರಂಭಗಳು ನಮ್ಮಲ್ಲಿ ನಡೆದಿದೆ. ಸತ್ಯಾಗ್ರಹವನ್ನು ಸಹ ಮಾಡಿದ್ದೇವೆ. ಶ್ರೀಮಾನ್ ಬಸವರಾಜ ರಾಯ ರೆಡ್ಡಿಯವರು ಕೂಡ ಹಿಂದೆ ಬಿದ್ದ ಭಾಗಗಳನ್ನು ಮುಂದೆ ತರಬೇಕಾದರೆ ಇಂತಹ ಮಂಡಳಿಗಳು ಆಗಬೇಕು ಎಂದು ಹೇಳಿದ್ದಾರೆ. ನಮ್ಮ ಭಾಗದ ಜನಗಳ ಬೇಡಿಕೆಯನ್ನು ಈಡೇರಿಸುವ ದಿಸೆಯಲ್ಲಿ ಈಗಿನ ಸರ್ಕಾರದವರು ಮಾನ್ಯತೆ ಕೊಟ್ಟಿದ್ದಾರೆ. ಜೊತೆಗೆ ಕೆಲವು ವಿಚಾರಗಳನ್ನು ನನಗೆ ಸಮಯವಿಲ್ಲದ ಕಾರಣಕ್ಕಾಗಿ ಸಾಂಕೇತಿಕವಾಗಿ ಹೇಳುವುದಾದರೆ ಆ ಭಾಗದ ಜನರಿಗೆ ಒಂದು ಒಳ್ಳೆಯ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ರಚನೆ ಮಾಡಿದ್ದಾರೆ. ಅದರ ಕಛೇರಿಯನ್ನು ಗುಲ್ಬರ್ಗಾದಲ್ಲಿ ಮಾಡುವಂತಹ ಕೆಲಸ ಮಾಡಿರುವುದರಿಂದ ಯೋಜನೆಗಳನ್ನು ಹೆಚ್ಚಿನ ರೀತಿಯಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಾಗ ಬಹುದು. ಈ ಸಂದರ್ಭದಲ್ಲಿ ನಾನು ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ. ಹಲವಾರು ಮಿತ್ರರು ಈವೊಂದು ವಿಧೇಯಕ ಬರುವಂತಹ ಸಂದರ್ಭದಲ್ಲಿ ನಾಳೆ ಮಾತನಾಡಬೇಕು ಇವತ್ತು ಮಾತನಾಡಬೇಕು ಎನ್ನುವ ಭಾವನೆ ಇದೆ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ನಾನು ಕನ್ನಡಿಗನು. ನಾನು ಕರ್ನಾಟಕ ರಾಜ್ಯದವನು. ಕನ್ನಡ ನಾಡು ನುಡಿ ಎಲ್ಲಾ ಭಾಗದಲ್ಲೂ ಡೆವಲಪ್‌ಮೆಂಟ್ ಆಗಬೇಕು ಆದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ.

ನಾವು ಕನ್ನಡಿಗರು ಇದ್ದೇವೆ ಹೈದರಾಬಾದ್-ಕರ್ನಾಟಕ ಭಾಗದ ಜನ ಕನ್ನಡಿಗರು ಕರ್ನಾಟಕ ಸರ್ವತೋಮುಖ ಅಭಿವೃದ್ಧಿಯಾಗಬೇಕು. ಆ ದೃಷ್ಟಿಯಲ್ಲಿ ನಮ್ಮ ಭಾಗ ಹಿಂದೆ ಬಿದ್ದ ಸಲುವಾಗಿ ತಾವೆಲ್ಲರೂ ಲಕ್ಷ್ಯ ಕೊಡಿರಿ ಎನ್ನುವ ಭಾವನೆಯಿಂದ ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ದೃಷ್ಟಿಯಿಂದ ಗುಲ್ಬರ್ಗದಲ್ಲಿ ತಾವೇನು ಕಛೇರಿ ಮಾಡಿದ್ದೀರಿ ಅದು ಬಹಳ ಸ್ವಾಗತವೆಂದು ಭಾವಿಸಿ ಅನುಷ್ಠಾನಕ್ಕೆ ತರಬೇಕಾದ ಕಾರ್ಯಕ್ರಮಗಳು ಯೋಜನೆಗಳು ಏನಿವೆ ಅವುಗಳನ್ನು ಅನುಷ್ಠಾನಕ್ಕೆ ತರಲು ಬೆಂಗಳೂರಿನಲ್ಲಿ ಹೈದರಾಬಾದ್-ಕರ್ನಾಟಕ ಮಂಡಳಿ ಕಛೇರಿಯಿದ್ದರೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಆದರ ಕಛೇರಿ ಗುಲ್ಬರ್ಗದಲ್ಲಿದ್ದರೆ ಯೋಜನೆಗಳನ್ನು ಶೀಘ್ರಗತಿಯಲ್ಲಿ ಅನುಷ್ಠಾನಕ್ಕೆ ತರಬಹುದೆಂದು ತಾವೇನು ಪ್ರಸ್ತಾಪ ಮಾಡಿದ್ದೀರಿ ಅದನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಎರಡನೇಯದಾಗಿ ಇನ್ನೊಂದು ಮಾತನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತಿದ್ದೇನೆ. ಈ ಭಾಗದ ಸರ್ವಾಂಗೀಣ ಅಭಿವೃದ್ಧಿಗೋಸ್ಕರವಾಗಿ ನಾವು ಕೊಟ್ಟಂತಹ ಹಣವನ್ನು ಅಲ್ಲಿ ಸಂಪೂರ್ಣವಾಗಿ ನಿಯೋಜಿತವಾಗಬೇಕಾದರೆ ಆ ಭಾಗದ ಬಗ್ಗೆ ಆಸಕ್ತಿ

ಇರತಕ್ಕವರನ್ನು ನೇಮಕ ಮಾಡತಕ್ಕದ್ದು ಸೂಕ್ತವೆಂದು ನಾನು ಸಲಹೆ ಕೊಡುತ್ತೇನೆ. ಈ ವಿಧೇಯಕದಲ್ಲಿ ಕೆಲವೊಂದು ವಿಚಾರಗಳನ್ನು ಹೇಳುತ್ತೀರಿ. ಸರ್ಕಾರ 10 ಜನರನ್ನು ಆ ಮಂಡಳಿಗೆ ನೇಮಕ ಮಾಡಿಕೊಳ್ಳುತ್ತದೆಂತು ಹೇಳುತ್ತಿದಿರಿ. ಇದು ನನ್ನ ದೃಷ್ಟಿಯಲ್ಲಿ ಸರಿಯಲ್ಲ ಇದು ಸರಿ ಅನಿಸುವುದಿಲ್ಲ. ಆ ಭಾಗದ ಲೋಕಸಭಾ ಸದಸ್ಯರು ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರು ಇದ್ದಂತಹ ಒಂದು ಕಾರಣದಿಂದ 10 ಜನರನ್ನು ನೇಮಕಾತಿ ಮಾಡುವುದಕ್ಕೆ ಬದಲು ಎರಡು-ಮೂರು ಜನರನ್ನು ನೇಮತ ಮಾಡಿದರೆ ಸರಿಯಾಗಬಹುದು. ಹೆಣ್ಣುಮಕ್ಕಳ ಸಲುವಾಗಿ ಯಾವುದೇ ರಿಸರ್ವೇಶನ್ ಇಲ್ಲ. ಸರ್ಕಾರ ನೇಮಕಾತಿ ಮಾಡುವ ಸಂದರ್ಭದಲ್ಲಿ ಮಹಿಳೆಯರಿಗೆ ಒಂದೆರಡು ಸ್ಥಾನಗಳನ್ನು ಕೊಡುವುದು ಉಚಿತವೆಂದು ಈ ಸಂಧರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಕಮರುಲ್ಲ ಇಸ್ಲಾಂರವರು ಹೇಳಿದ ಹಾಗೆ ಕರ್ನಾಟಕ ಲೋಕಸೇವಾ ಆಯೋಗದ ಒಂದು ರಿಕ್ರೂಟ್‌ಮೆಂಟ್ ಸಮಿತಿ ನಮ್ಮ ಹೈದರಾಬಾದ್-ಕರ್ನಾಟಕ ಭಾಗಕ್ಕೆ ಬರಬೇಕು ಆ ಭಾಗದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಡಿವಿಜನ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡುವುದಾದರೆ ನಮ್ಮಲ್ಲಿರತಕ್ಕ ಬಡ ವಿದ್ಯಾರ್ಥಿಗಳಿಗೆ ಯಾರು ಕನಿಷ್ಟ ಬಡತನದಲ್ಲಿದ್ದಾರೆ. ಅಂತಹವರಿಗೆ ನೌಕರಿಯೋ ಸಿಗುವುದಿಲ್ಲ. ಆ ರೀತಿ ಮಾಡುವುದರಿಂದ ಅವರಿಗೆ ನೌಕರಿ ಸಿಗುವ ಅವಕಾಶವಾಗಬಹುದು. ಆ ದೃಷ್ಟಿಯಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ ಹೈದರಾಬಾದ್-ಕರ್ನಾಟಕ ಭಾಗದಲ್ಲಿ ವಿಭಾಗಮಟ್ಟದಲ್ಲಿ ಒಂದು ಕರ್ನಾಟಕ ಲೋಕ ಸೇವಾ ಆಯೋಗದ ರಿಕ್ರೂಟ್‌ಮೆಂಟ್ ಕಛೇರಿಯನ್ನು ಮಾಡಬೇಕೆಂದು ಕೇಳಬಯಸುತ್ತೇನೆ. ರಾಜ್ಯಮಟ್ಟದಲ್ಲಿರತಕ್ಕ ಸಣ್ಣ ಸಣ್ಣ ಕೈಗಾರಿಕೆಗಳು ದೊಡ್ಡ ದೊಡ್ಡ ಕೈಗಾರಿಕೆಗಳು ಏನಿವೆ ಮೈಸೂರು ಲ್ಯಾಂಪ್ಸ್ ಈ ತರಹ ಕೈಗಾರಿಗೆಗಳ ಘಟಕಗಳನ್ನು ನಮ್ಮ ಭಾಗದಲ್ಲೂ ತೆರೆಯಬೇಕು. ಸಣ್ಣ ಸಣ್ಣ ಕೈಗಾರಿಕೆಗಳು ಅಭಿವೃದ್ಧಿಯಾಗಬೇಕಾದರೆ ನಮ್ಮ ಭಾಗದಲ್ಲಿಯೂ ಸಹ ಇಂತಹ ಕೈಗಾರಿಕೆಗಳು ಬರಬೇಕು. ತಾವು ಕರ್ನಾಟಕ ರಾಜ್ಯಸರ್ಕಾರದ ಸಾಮ್ಯದಲ್ಲಿರತಕ್ಕಂಥ ಕೈಗಾರಿಕೆಗಳನ್ನು ಬೀದರ್, ಗುಲ್ಬರ್ಗ, ಬಳ್ಳಾರಿ ಈ ಭಾಗದಲ್ಲಿ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ನಾನು ಸಾಮಾನ್ಯವಾಗಿ ಹೆಚ್ಚಿಗೆ ಮಾತನಾಡುವುದಿಲ್ಲ. ಆದರೆ ನಮ್ಮ ಭಾಗದ ವಿಧೇಯಕದ ಬಗ್ಗೆ ಕೆಲವು ವಿಚಾರಗಳನ್ನು ಸ್ಪಷ್ಟವಾಗಿ ನಾನು ಹೇಳುವುದಕ್ಕೆ ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇನ್ನು ಹೆಚ್ಚು ವಿಚಾರಗಳನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ ಮಾನ್ಯ ಉಪಾಧ್ಯಕ್ಷಣಿಯವರು ಕೆಲವು ವಿಚಾರಗಳನ್ನು ಸಾಂಕೇತಿಕವಾಗಿ ಮಾತನಾಡಲು ನನಗೆ ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) : ಮಲೆನಾಡು ಅಭಿವೃದ್ಧಿ ಮಂಡಳಿ ವಿಧೇಯಕ ಮತ್ತು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ವಿಧೇಯಕ ಬಗ್ಗೆ ಇದು ಅಭಿವೃದ್ಧಿ ಆಗಬೇಕೆಂದು ಸರ್ವಾನುಮತದಿಂದ ತೀರ್ಮಾನವಾಗಿದೆ. ಇದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇದಕ್ಕೆ ಹೆಚ್ಚಿಗೆ ಹಣ ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿಗಳನ್ನು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಉಪಾಧ್ಯಕ್ಷೀಣಿಯವರೇ ಈಗಾಗಲೇ ನಾವು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ಪಾಸ್ ಮಾಡಿದ್ದೇವೆ. ಅದೇ ರೀತಿ ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ಇಲ್ಲಿ ಪರಿಶೀಲನೆ ಮಾಡುತ್ತಿದ್ದೇವೆ. ಇದನ್ನು ಪರಿಶೀಲನೆ ಮಾಡುವುದಕ್ಕೆ ಮುಖ್ಯವಾದ ಕಾರಣ ಕರ್ನಾಟಕ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಏನು ಅಭಿವೃದ್ಧಿ ಇದೆ. ಆ ಅಭಿವೃದ್ಧಿಯಲ್ಲಿ ಅಸಮಾನತೆ, ಅದನ್ನು ಇರುವುದನ್ನು ನಾವು ಮನಗಂಡಿದ್ದೇವೆ. ಈ ಅಸಮಾನತೆ ಇವತ್ತಿನದಲ್ಲ ಅದಕ್ಕೆ ಐತಿಹಾಸಿಕ, ಕಾರಣ ಹಾಗೂ ಭೌಗೋಳಿಕ ಕಾರಣಗಳಿವೆ. ಈ ರೀತಿಯಾದ ಭೌಗೋಳಿಕವಾದ ಮತ್ತು ಐತಿಹಾಸಿಕ ಕಾರಣಗಳಿಂದ ಉಂಟಾದ ಅಸಮಾನತೆಯನ್ನು ನಿವಾರಣೆ ಮಾಡುವುದಕ್ಕೆ ಒಂದು ಪ್ರಯತ್ನ ಎಂದು ಇದನ್ನು ಪ್ರದೇಶ ಅಭಿವೃದ್ಧಿ ಮಂಡಳಿ ವಿಧೇಯಕಗಳ ಮುಖಾಂತರ ಮಾಡಬೇಕೆಂಬ ಮನಸ್ಸು ಸರ್ಕಾರಕ್ಕೆ ಇದೆಯೆಂದು ಹೇಳಿದ್ದಾರೆ. ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ. ಕೇವಲ ಮಂಡಳಿಗಳ ಸ್ಥಾಪನೆಯಿಂದ ಅಲ್ಲಿಂಯ ಪ್ರದೇಶಗಳ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದರೆ ಅದು ಸಾಧ್ಯವಿಲ್ಲ ಅಲ್ಲಿರುವಂಥ ಅಸಮಾನತೆಯನ್ನು ಅದು ಶೈಕ್ಷಣಿಕ ಕ್ಷೇತ್ರದಲ್ಲಿ ಇರಬಹುದು. ಅಥವಾ ಬೇರೆ ಬೇರೆ ಅಭಿವೃದ್ಧಿ ಕ್ಷೇತ್ರಗಳು ಇರಬಹುದು ಅಲ್ಲಿರುವಂಥ ಅನಮಾನತೆಯನ್ನು ಕಂಡುಕೊಂಡು ಅದು ಇಂತಿಷ್ಟು ನಿಗದಿಯಾದಂಥ ಅವಧಿಯೊಳಗೆ ಅದನ್ನು ಬೇರೆಯವರ ಸಮಕ್ಕೆ ತರುವಂಥ ಕಾರ್ಯಕ್ರಮ ರೂಪ ಮಾಡದೇ ಇದ್ದರೆ ಕೇವಲ ನಾವು ಮಂಡಳಿಗಳನ್ನು ಸ್ಥಾಪನೆ ಮಾಡುವುದರಿಂದ ಮತ್ತು ಅವರಿಗೆ ಅಧಿಕಾರವನ್ನು ಕೊಡುವುದರಿಂದ ಸಾಧ್ಯವಿಲ್ಲ. ಅದಕ್ಕೆ ಬೇಕಾದಂಥ ಆರ್ಥಿಕ ನೆರವನ್ನು ಕೊಡಬೇಕಾಗುತ್ತದೆ. ಈ ಆರ್ಥಿಕ ನೆರವನ್ನು ಕೊಡುವ ಬಗ್ಗೆ ವಿಧೇಯಕದಲ್ಲಿ ಹೇಳಿದ್ದಾರೆ ವಾರ್ಷಿಕ ಯೋಜನೆಯನ್ನು ನಾವು ಮಾಡುತ್ತೇವೆ. ಆದರೆ ವಾರ್ಷಿಕ ಯೋಜನೆಯನ್ನು ಯಾವ ಆಧಾರದ ಮೇಲೆ ಮಾಡುತ್ತೇವೆ ಎಂಬುದನ್ನು ತಿಳಿಸಬೇಕು. ಪಂಚವಾರ್ಷಿಕ ಯೋಜನೆಯಲ್ಲಿ ಏನು ಯೋಜನೆಗಳನ್ನು ಹೇಳಿದ್ದಾರೆ ಅದನ್ನು ಕಾರ್ಯರೂಪಕ್ಕೆ ತರುವಂಥ ಮೇಲ್ವಿಚಾರಣೆ ಮಾಡುವಂಥ ಅಧಿಕಾರವನ್ನು ಸಹ ಈ ಮಂಡಳಿಗೆ ಕೊಟ್ಟಿದ್ದಾರೆ. ನಾನು ಕೇಳುತ್ತಿದ್ದೇನೆ ಈ ಮಂಡಳಿಗೆ ಕೊಟ್ಟಂಥ ಅಧಿಕಾರದಲ್ಲಿ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ವರ್ಗಾವಣೆ ಮಾಡುವಂತಹ ಅಧಿಕಾರವನ್ನು ಈ ವಿಧೇಯಕದ ಮುಖಾಂತರ ಕೊಟ್ಟಿದ್ದೀರಿ ಇದು ಕಾನೂನು ಬಾಹಿರವಾದದ್ದು ಎಂಬ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಏನು ರಿ-ಅಪ್ರೋಪ್ರಿಯೇಷನ್ ಮಾಡುತ್ತಿದ್ದೀರಿ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ, ಬೇಡಿಕೆಯ ಒಳಗಡೆ ತಾವು ಮಾಡಬೇಕೇ ಹೊರತಾಗಿ ಒಂದು ಬೇಡಿಕೆಯಿಂದ ಮತ್ತೊಂದು ಬೇಡಿಕೆಗೆ ಹಣವನ್ನು ವರ್ಗಾವಣೆ ಮಾಡುವಂಥ ಅಧಿಕಾರವನ್ನು ತಾವೇನು ಇದರ ಮುಖಾಂತರ ಕೊಟ್ಟಿದ್ದೀರಿ. ಇದರ ಬಗ್ಗೆ ತಾವು ಪುನರ್‌ಪರಿಶೀಲನೆ ಮಾಡಬೇಕಾಗಿದೆ.

15. ಯೋಜನೆಗಳ ಅನುಷ್ಠಾನ-....."ಯಾವುದೇ ಕಾರಣಕ್ಕಾಗಿ ಒಂದು ಅಭಿವೃದ್ಧಿ ಇಲಾಖೆಯು ಯೋಜನೆಯ ಅಡಿಯಲ್ಲಿ ತನಗೆ ಹಂಚಿಕೆ ಮಾಡಲಾದ ಮೊಬಲಗಿನ ಪೈಕಿಯಿಂದ ಪೂರ್ಣ ವೆಚ್ಚವನ್ನು ಭರಿಸುವ ಸಂಭವವಿಲ್ಲದಿದ್ದರೆ ಮಂಡಳಿಯು ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ನಿಧಿಗಳನ್ನು ಪುನರ್ವಿನಿಯೋಗವನ್ನು ಸಹ ಮಾಡಬಹುದು."

ಇದರಲ್ಲಿ ಒಂದು ಬೇಡಿಕೆಯಿಂದ ಮತ್ತೊಂದು ಬೇಡಿಕೆಗೆ ಹಣವನ್ನು ಪುನರ್‌ವಿನಿಯೋಗ ಮಾಡುವಂಥ ಮಾತನ್ನು ಏನು ಹೇಳುತ್ತಿದ್ದೀರಿ. ಅದು ಕಾನೂನುಬದ್ಧವಾದಂಥ ಪ್ರಸ್ತಾವನೆ ಆಗುವುದಿಲ್ಲ. ತಾವು ನಿಯಮಗಳನ್ನು ಮಾಡುವಾಗ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ಈಗ ಒಂದು ಕೆಲಸವನ್ನು ಸರ್ಕಾರ ಮಾಡಿದೆ. ಕರ್ನಾಟಕದ ವಿವಿಧ ಪ್ರದೇಶಗಳು ಏನಿವೆ ಅವುಗಳ ಪೈಕಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದ ಅಭಿವೃದ್ಧಿಯಲ್ಲಿ ಅಂತರ ಇದೆಯೆಂಬ ಮಾತನ್ನು ಹೇಳಿದ್ದಾರೆ. ಈ ಅಂತರವನ್ನು ನಾವು ಗುರುತುಮಾಡಿದ್ದೇವೆ. ಆದರೆ ಈ ಅಂತರವನ್ನು ಬೆಳೆಸುವಂಥ ಪ್ರವೃತ್ತಿ ಪುನಃ ಆಗಬಾರದು. ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಆಯಿತು. ಹೈದರಾಬಾದ್ ಪ್ರದೇಶ ಅಭಿವೃದ್ಧಿ ಮಂಡಳಿ ಅಂತ ಕೇಳಿದರೆ ಅದಕ್ಕೆ ಪ್ರತಿಯಾಗಿ ನಾವು ಸಹ ಬರಪೀಡಿತ ಪ್ರದೇಶಗಳ ಅಭಿವೃದ್ಧಿ ಮಂಡಳಿ ಕೇಳುವ ಸ್ಥಿತಿಗೆ ನಮ್ಮನ್ನು ತೆಗೆದುಕೊಂಡು ಹೋಗಬಾರದು ಎಲ್ಲೆಲ್ಲಿ ಅಭಿವೃದ್ಧಿ ವಿಚಾರಗಳ ಅಸಮಾನತೆ ಇದೆ. ಅದರ ಅವಶ್ಯಕತೆ ಇದೆ ಅದರ ಆಧಾರದ ಮೇಲೆ ಯೋಜನೆಗಳನ್ನು ರೂಪ ಮಾಡಬೇಕಾದ ಎಚ್ಚರಿಕೆಯನ್ನು ಸರ್ಕಾರ ವಹಿಸುತ್ತದೆ ಎಂಬ ಮಾತನ್ನು ಹೇಳಿ. ನಾನು ನನ್ನ ಮಾತುಗಳನ್ನು ಪೂರೈಸುತ್ತೇನೆ.

ಶ್ರೀ ಹನುಮಸಗೌಡ ಎಸ್. ಪಾಟೀಲ್ ಕುಷ್ಟಗಿ : ಮಾನ್ಯ ಉಪಾಧ್ಯಕ್ಷೀಣಿಯವರೇ ಇಂದು ಹೈದರಾಬಾದ್-ಕರ್ನಾಟಕ ಪ್ರದೇಶಾಬಿವೃದ್ಧಿ ಮಂಡಳಿಯು ಶಾಸನಬದ್ಧ ಸ್ವರೂಪದ ಮಸೂದೆಯು ಇಲ್ಲಿ ಮಂಡಿಸಲ್ಪಟ್ಟಿದೆ. ತೀರಾ ಹಿಂದುಳಿದ ಪ್ರದೇಶವಾದ ಹೈದರಾಬಾದ್-ಕರ್ನಾಟಕದ ಒಂದು ಸಮಾನತೆಯನ್ನು ಸಾಧಿಸುವುದಕ್ಕೆ 1980ರಲ್ಲಿ ಇದಕ್ಕೆ ಮೂರ್ತಸ್ವರೂಪವನ್ನು ಒದಗಿಸಲಾಯಿತು. ಆದರೆ, ನಮ್ಮ ಪ್ರದೇಶದವರೇ ಆದಂಥ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ, ಇದಕ್ಕೆ ಹೆಚ್ಚಿನ ಚಾಲನೆಯನ್ನು ಕೊಟ್ಟು, ಹಣಕಾಸಿನ ನೆರವನ್ನು ಒದಗಿಸಿ, ಮೂರ್ತಸ್ವರೂಪವನ್ನು ಕೊಟ್ಟರು, ಆದರೆ, ಈಗ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಬಂಗಾರಪ್ಪನವರು ಗುಲ್ಬರ್ಗಾದಲ್ಲಿ, ಈ ವಿಭಾಗದ ಪರಿಸ್ಥಿತಿಯ ಅವಲೋಕನೆಗಾಗಿ ಒಂದು ಸಭೆಯನ್ನು ಕರೆದಾಗ, ಇದಕ್ಕೆ ಶಾಸನಬದ್ಧ ಸ್ವರೂಪವನ್ನು ಕೊಡತಕ್ಕ ಒಂದು ಆಶ್ವಾಸನೆಯನ್ನು ಕೊಟ್ಟರೂ ಕೂಡ ಇಲ್ಲಿಯ ನಮ್ಮ ಶಾಸಕರು. ಹಾಗೂ ಲೋಕಸಭಾ ಸದಸ್ಯರು ಇದರ ಬಗ್ಗೆ ಆತಂಕವನ್ನು ಮತ್ತು ಅನುಮಾನವನ್ನು ಇಟ್ಟುಕೊಂಡಿದ್ದೆವು. ಇವತ್ತಿನ ದಿವಸ, ಈ ವಿಧೇಯಕವನ್ನು ಮಂಡಿಸಿದಾಗ ನಿಜವಾಗಿಯೂ ನಮಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಆ ಕನಸನ್ನು ನನಸು ಮಾಡಬೇಕೆಂಬ ಆಸೆಯಿಂದ ಬಹಳ ಹೃತ್ಪೂರ್ವಕವಾಗಿ, ಹೈದರಾಬಾದ್ ಕರ್ನಾಟಕ ಪ್ರದೇಶದ ಜನತೆಯ ಪರವಾಗಿ, ಈಗಿನ ಮುಖ್ಯಮಂತ್ರಿಗಳಿಗೆ ಹಾಗೂ ಅವರ ಸಹೋದ್ಯೋಗಿಗಳಿಗೆ ಅಭಿನಂದನೆಗಳನ್ನು ಹಾಗೂ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಇದಕ್ಕೆ ಸರ್ವಪಕ್ಷಗಳಿಂದಲೂ ಕೂಡ ಬೆಂಬಲ ಸಿಕ್ಕಿದೆ. ಏಕೆಂದರೆ, ಹೈದರಾಬಾದ್-ಕರ್ನಾಟಕ ಪ್ರದೇಶ ಭಾರಿ ಹಿಂದುಳಿದ ಪ್ರದೇಶ. ರಾಯಚೂರು ಜಿಲ್ಲೆ ಅಥವಾ ಗುಲ್ಬರ್ಗಾ ಜಿಲ್ಲೆ ಎಂದಕೂಡಲೇ, ಇಲ್ಲಿ ಮಂಡ್ಯ ಜಿಲ್ಲೆ ಎಂದು ಹೇಳಿದರೆ, ಹೇಗೆ ಹಸಿರು ನಮ್ಮ ಕಣ್ಮುಂದೆ ಬರುತ್ತದೋ, ಅದೇ ರೀತಿ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿಯೂ ಕೂಡ ರಾಯಚೂರು ಜಿಲ್ಲೆಯ ತುಂಗಭದ್ರಾ ನದಿ ಪ್ರದೇಶ ಎಂದ ಕೂಡಲೇ ಸಿಂಧುನೂರು, ಗಂಗಾವತಿ, ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಸೊಂಡೂರು ಇವು ಕಣ್ಮುಂದೆ ಬಂದು, ಅದರ ಪಕ್ಕದ ಕರಿನೆರಳಿನಲ್ಲಿಯೇ ಇರತಕ್ಕ ಯಲಬುರ್ಗ, ಕುಷ್ಟಗಿ, ಲಿಂಗಸೂಗೂರು,

ಕೂಡ್ಲಗಿ ಇಂತಹ ಅನೇಕ ಡ್ರೈಲ್ಯಾಂಡ್, ಒಣಬೇಸಾಯ ಇರತಕ್ಕ ಪ್ರದೇಶಗಳು ನಮ್ಮ ಗಮನಕ್ಕೆ ಬರುವುದಿಲ್ಲ. ಅಲ್ಲಿ ನೀರು ಸಹಿತ ಸಿಕ್ಕುವುದಿಲ್ಲ. 300-400 ಅಡಿ ಬೋರ್ ಕೊರೆದರೂ ನೀರು ಸಿಕ್ಕುವುದಿಲ್ಲ. ಇಂತಹ ಧಾರುಣ ಪರಿಸ್ಥಿತಿಯಲ್ಲಿರತಕ್ಕ ಹೈದರಾಬಾದ್-ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ, ಶಾಸನಬದ್ಧ ಸ್ವರೂಪವನ್ನು ಕೊಟ್ಟಂಥ ಮುಖ್ಯಮಂತ್ರಿಗಳಿಗೆ ಮತ್ತೊಮ್ಮೆ ಅಭಿನಂದಿಸುತ್ತೇನೆ. ಈಗಾಗಲೇ ಕಾಮಗಾರಿಗಳು ಪ್ರಾರಂಭವಾಗಿವೆ, ಇದರ ಬಗ್ಗೆ ಹೇಳುವ ಅವಶ್ಯಕತೆ ಇಲ್ಲದಿದ್ದರೂ, ಕೂಡ ನಮಗೆ ಅವಕಾಶ ಸಿಕ್ಕುವುದು ಕಡಿಮೆ. ಈ ಕೆಲಸಗಳಿಗಾಗಿ ಹೈಪವರ್ ಕಮಿಟಿ ಎಂದು ಮಾಡಿದ್ದಾರೆ. ಶಾಸಕರಿಗೆ ಕೊಟ್ಟಂಥ ಅಧಿಕಾರದ ವ್ಯಾಪ್ತಿಯಲ್ಲಿ, ಅನೇಕ ರೋಡುಗಳು, ಅನೇಕ ಶಾಲಾ ಕಟ್ಟಡಗಳು ಮುಂತಾದ ಕಾರ್ಯಬಾಹುಳ್ಯವನ್ನು ನಿರ್ವಹಿಸಬೇಕಾಗಿದೆ. ಈಗ ಹಣ ದುರುಪಯೋಗವಾಗದಂತೆ ಹೈಪವರ್ ಕಮಿಟಿಯವರಿಗೆ, ಮುಖ್ಯಮಂತ್ರಿಗಳು, ಮಾನ್ಯಸಚಿವರು ಕೆಲವು ಮಾರ್ಗಸೂಚಿಗಳನ್ನು ಕೊಡಬೇಕು. ಹೈದರಾಬಾದ್-ಕರ್ನಾಟಕ ಪ್ರದೇಶದ ಸಲುವಾಗಿ, ಶಾಸನಬದ್ಧ ಸ್ವರೂಪ ಕೊಟ್ಟಿದ್ದಕ್ಕಾಗಿ, ಆ ಭಾಗದ ಸರ್ವ ಜನತೆಯ ಪರವಾಗಿ ಮುಖ್ಯಮಂತ್ರಿಗಳಿಗೆ ಹಾಗೂ ಅವರ ಸಹೋದ್ಯೋಗಿಗಳಿಗೆ ಅನಂತಾನಂತ ಧನ್ಯವಾದಗಳನ್ನು ಸಲ್ಲಿಸಿ, ಸಂಪೂರ್ಣ ಸಹಕಾರ ಕೊಟ್ಟಂಥ ಸರ್ವಪಕ್ಷದ ಶಾಸಕರಿಗೂ ಆ ಭಾಗದ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸಿ, ಅವಕಾಶ ಕೊಟ್ಟಂಥ ನಿಮ್ಮ ವಿಶಾಲ ಹೃದಯಕ್ಕೆ ವಂದಿಸುತ್ತೇನೆ. ಏಕೆಂದರೆ ಆ ಕಡೆ ಗದ್ದಲ ಮಾಡಿದವರಿಗೆ ಹೆಚ್ಚಿನ ಅವಕಾಶ ಸಿಗುತ್ತದೆ. ಸುಮ್ಮನೆ ಕುಳಿತುಕೊಂಡವರನ್ನು ಕೇಳುವುದೇ ಇಲ್ಲ. ಜೊತೆಗೆ ನಾವು ಮಾತನಾಡಿದರೂ ಪತ್ರಿಕೆಯವರು ಹಾಕುವುದಿಲ್ಲ. ನಾವು ಮೂಕ ಪ್ರೇಕ್ಷಕರಾಗಿ ಕುಳಿತುಕೊಳ್ಳತಕ್ಕಂಥ ಪ್ರಸಂಗ ಬಂದಿದೆ. ನಾವು ಸುಮಾರು 20 ವರ್ಷಗಳಿಂದ ಸಾಕಷ್ಟು ಅನುಭವ ಪಡೆದಿರುತ್ತೇವೆ. ಆ ಕ್ಷೇತ್ರದಲ್ಲಿ ಶಾಸಕರಾಗಿ, ಎ.ಪಿ.ಎಂ.ಸಿ. ಅಧ್ಯಕ್ಷರಾಗಿ, ಪಿ.ಎಲ್.ಡಿ.ಬ್ಯಾಂಕಿನ ಪ್ರಸಿಡೆಂಟರಾಗಿ, ಪಂಚಾಯ್ತಿ ಸದಸ್ಯರಿಂದ ಹಿಡಿದು, 20 ವರ್ಷದಿಂದ ನಮ್ಮ ಕ್ಷೇತ್ರದ ಮಟ್ಟಿಗೆ ಸಾಕಷ್ಟು ಅನುಭವವನ್ನು ಪಡೆದಿದ್ದೇವೆ. ಆದರೂ ಕೂಡ ನಮ್ಮನ್ನು, ನೀವು ನೋಡುವುದಿಲ್ಲ. ಈವತ್ತು ತಾವು ನಮ್ಮನ್ನು ನೋಡಿದ್ದೀರಿ, ಈ ನಿಮ್ಮ ಹೃದಯ ವೈಶಾಲ್ಯಕ್ಕೆ ಅಭಿನಂದನೆ ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಉಪಾಧ್ಯಕ್ಷಣಿಯವರೇ, ಈ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಹೇಗೋ, ಹಾಗೆಯೇ ಈ ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್ ಅದೇ ತರಹದ ಒಂದು ಕಾನೂನು. ಇದರ ಜೂರಿಸ್‌ಡಿಕ್ಷನ್ ತಮಗೆಲ್ಲಾ ಗೊತ್ತಿರುವ ಹಾಗೆ, ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಆಗಿದ್ದು, ಗುಲ್ಬರ್ಗಾ ಅದರ ಹೆಡ್‌ಕ್ವಾರ್ಟರ್ ಆಗಿರುತ್ತದೆ. ಇದರ ಅವಧಿ ಮೂರು ವರ್ಷ. ಇದಕ್ಕೆ ಆಗಲೇ 50 ಕೋಟಿ ರೂಪಾಯಿಗಳನ್ನು ಕೊಟ್ಟು ಖರ್ಚು ಮಾಡಿದ್ದಾರೆ. ಪ್ರತಿವರ್ಷ 50 ಕೋಟಿ ರೂಪಾಯಿ ಕೊಡಬೇಕೆಂಬುದು ನಮ್ಮ ಉದ್ದೇಶ, ತಮಗೆ ಗೊತ್ತಿರುವಹಾಗೆ, ಚಾರಿತ್ರಿಕವಾಗಿ, ಭೌಗೋಳಿಕವಾಗಿ ಹಿಂದೆ ಬಿದ್ದಿದೆ ಎಂದು ಎಲ್ಲರಿಗೂ ಗೊತ್ತಿದೆ. ಹೈದರಾಬಾದ್-ಕರ್ನಾಟಕದವರು ಬಹಳ ಮಟ್ಟಿಗೆ ಒತ್ತಿ ಹೇಳಿದರು. ಅವರು ಹೇಳಿದಹಾಗೆ, ಬಳ್ಳಾರಿ, ರಾಯಚೂರು ನೋಡಿದರೆ, ಆ ಭಾಗ ಹೇಗೆ ಬರಡಾಗಿ ಕಾಣುತ್ತದೆಯೋ ಹಾಗೆಯೇ ಮಂಡ್ಯ ನೋಡಿ ಪಕ್ಕದಲ್ಲಿ ನಾಗಮಂಗಲ ನೋಡಿದರೆ ನಮ್ಮಲ್ಲೂ ಹಾಗೆಯೇ ಇದೆ. ಹೀಗೆ ಬರಡಾಗಿರುವ ಜಾಗ ಬೇಕಾದಷ್ಟು ಇದೆ. ಆದರೂ, ನಮ್ಮ ಹಳೆಯ ಮೈಸೂರಿನವರ ಪ್ರತೀತಿ ಏನು, ಹಳೆಯ ಮೈಸೂರಿನವರ ಒಂದು ದೊಡ್ಡಗುಣ

ಏನೆಂದರೆ, ಅತಿಥಿಗಳು ಬಂದಾಗ, ನಮಗೆ ಹೊಟ್ಟೆಗಿಲ್ಲದೇ ಹೋದರೂ, ಅವರಿಗೆ ಕೊಡುವುದು ನಮ್ಮ ಅಭ್ಯಾಸ. ನಮಗೆ ಬೆನೋವಲೆಂಟ್ ರೂಲರ್ಸ್ ಇದ್ದರು. ಮಹಾರಾಜರು. ದಿವಾನರು ಎಲ್ಲರೂ ಇದ್ದರು. ಅವರು, ನಮಗೆ ಬೇಕಾದಷ್ಟು ಮಾಡಿದರು. ಪಾಪ ಆ ಸೌಭಾಗ್ಯ ನಿಮಗಿರಲಿಲ್ಲ. ನಿಮ್ಮ ಮಹಾರಾಜರು ಇದು ಮಾಡಲಿಲ್ಲ. ನೀವು ಈ ಕಷ್ಟದಲ್ಲಿ ಸಿಕ್ಕಿದ್ದೀರಿ. ಆದ್ದರಿಂದ ತಾವು ಏನು ಕಷ್ಟದಲ್ಲಿದ್ದೀರಿ, ನಿಮಗೆ ಸಹಾಯ ಮಾಡಬೇಕಾದುದು. ವಿಕೇಂದ್ರೀಕರಣವಾದ ಮೇಲೆ ನಮ್ಮ ಕರ್ನಾಟಕದವರ ಕರ್ತವ್ಯ. ಆದ್ದರಿಂದ, ಅದೇ ರೀತಿಯಾಗಿ, ನಾವು ಈ ಕಾನೂನನ್ನು ತೆಗೆದುಕೊಂಡು ಬಂದಿದ್ದೇವೆ. ಇದಕ್ಕೂ, ಜಿಲ್ಲಾಪರಿಷತ್ತಿಗೂ ಯಾವತರಹದ ಸಂಬಂಧವೂ ಇಲ್ಲ. ಜಿಲ್ಲಾಪರಿಷತ್ ಕೊಡತಕ್ಕ ಹಣಕ್ಕೂ, ಇದಕ್ಕೂ ಯಾವ ತರಹ ಅಂಟೂ ಇರುವುದಿಲ್ಲ, ಇದರ ಡೆವಲಪ್‌ಮೆಂಟ್‌ಗೆ ನಾವು ಬೇರೆ ದುಡ್ಡು ಕೊಡುತ್ತೇವೆ. ನಮ್ಮ ಪ್ಲಾನಿಂಗ್‌ನಿಂದ exchequer ನಿಂದ ಕೊಡುತ್ತಿದ್ದೇವೆ. This is a complamentary act. ಇದಕ್ಕೆ ಮೂರು ವರ್ಷದ ಕವರ್ ಇರುತ್ತದೆ. ಸ್ಪೆಷಲ್ಲಾಗಿ ಬೋರ್ಡ್‌ಗೆ, ಆಲ್‌ರೌಂಡ್ ಡೆವಲಪ್‌ಮೆಂಟ ಆಗಬೇಕೆಂದು ಕೊಟ್ಟಿದ್ದೇವೆ.

ಅದೇ ರೀತಿ ಈ ಆಕ್ಟ್ ಪ್ರಕಾರ ಒಂದು ಇಂಪ್ಲಿಮೆಂಟ್ ಬೋರ್ಡ್ ಮಾಡುತ್ತಿದ್ದೇವೆ. ಎಲ್ಲಾ ತರಹ ಡೆವಲಪ್‌ಮೆಂಟ್ ಆಗಬೇಕೆಂಬ ಉದ್ದೇಶ ಇದೆಯೇ ಹೊರತು, ಇದರಲ್ಲಿ ಬೇರೆ ಯಾವತರಹದ ಉದ್ದೇಶವೂ ಇಲ್ಲ. ಇದಕ್ಕೆ 10 ಜನ ಮೆಂಬರ್ಸ್‌ನ್ನು ನಾವು ನಾಮಿನೇಟ್ ಮಾಡುತ್ತೇವೆ. That will be at pleasure of the Government. ಇದನ್ನು ತಾವುಗಳೆಲ್ಲಾ ನಡೆಸಿಕೊಂಡು ಚೆನ್ನಾಗಿ ಇಂಪ್ಲಿಮೆಂಟ್ ಮಾಡಿಸಿ. ತಾವು ಈ ಕಾನೂನನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಖಮರುಲ್ ಇಸ್ಲಾಂರವರು, ಬಸವರಾಜ ರಾಯಿರೆಡ್ಡಿಯವರು. ಮಲಕರೆಡ್ಡಿಯವರು, ಬಸವರಾಜ ಪಾಟೀಲರು, ಎಲ್ಲರೂ ಮಾನ್ಯ ಮುಖ್ಯಮಂತ್ರಿಗಳನ್ನು, ನಮ್ಮ ಸರಕಾರವನ್ನು ಹಾಡಿಹೊಗಳಿದ್ದಾರೆ. ನಿಮಗೆಲ್ಲಾ ಸರಕಾರದ ಪರವಾಗಿ, ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಕಾನೂನಿಗೆ ಎಲ್ಲರೂ ಸಾಮೂಹಿಕವಾಗಿ ಯಾವ ತರಹದ ವಿರೋಧವನ್ನೂ ವ್ಯಕ್ತಪಡಿಸದೇ ಪಾಸ್ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ " 1991 ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಪರ್ಯಾಲೋಚಿಸುವುದು" ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು. ಖಂಡ 2ರಿಂದ 9 ಎರಡೂ ಸೇರಿದಂತೆ,

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ "ಖಂಡ 2 ರಿಂದ 9ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 9ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಯಿತು)

ಖಂಡ 10ಕ್ಕೆ ತಿದ್ದುಪಡಿ

ಉಪಾಧ್ಯಕ್ಷಿಣಿಯವರು : ಖಂಡ 10ಕ್ಕೆ ಮಾನ್ಯ ಖಮರುಲ್ ಇಸ್ಲಾಂರವರು ತಿದ್ದುಪಡಿ ಕೊಟ್ಟಿರುತ್ತಾರೆ. ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

SRI QUMARUL ISLAM : I move the amendment to the Hyderabad Karnataka Area Development Board Bill,

"That in clause 10, after "n" the following item may be added:

o) The Deputy Commissioner of Gulbarga, Raichur and Bellary Districts.

p) The Commissioner, City Corporation, Gulbarga."

(The amendment was proposed)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಉಪಾಧ್ಯಕ್ಷರೇ, ಖಂಡ 10ಕ್ಕೆ ಕೊಟ್ಟಿರುವ ತಿದ್ದುಪಡಿಯ 'ಒ' ಭಾಗದಲ್ಲಿ ಅವರು ಏನು ಡೆಪ್ಯುಟಿ ಕಮೀಷನರ್‌ಗಳು ಇರಬೇಕೆಂದು ಹೇಳುತ್ತಿದ್ದಾರೆ, ಅದನ್ನು ಸರಕಾರ ಒಪ್ಪಿಕೊಳ್ಳುತ್ತದೆ.

SRI QUMARUL ISLAM : I withdraw the 'p' and press for "o".

(Amendment to clause 10, item (p) was by leave, withdrawn)

ಉಪಾಧ್ಯಕ್ಷಿಣಿಯವರೇ : ಪ್ರಸ್ತಾವ ಏನೆಂದರೆ

" That in clause 10, after "n" the following item may be added :

o) The Deputy Commissioner of Gulbarga, Raichur & Bellary districts".

(ತಿದ್ದುಪಡಿಯನ್ನು ಖಂಡ 10 ಕ್ಕೆ ಸೇರಿಸಲ್ಪಟ್ಟಿತು)

ಖಂಡ 10 ತಿದ್ದುಪಡಿಯಾದ ರೂಪದಲ್ಲಿ

ಉಪಾಧ್ಯಕ್ಷಿಣಿಯವರೇ : ಪ್ರಸ್ತಾವ ಏನೆಂದರೆ " ತಿದ್ದುಪಡಿಯಾದ ರೂಪದಲ್ಲಿರುವ ಖಂಡ 10 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ ರೂಪದಲ್ಲಿರುವ ಖಂಡ 10 ವಿಧೇಯಕದ ಅಂಗವಾಯಿತು)

ಖಂಡ 11 ರಿಂದ 19 ಎರಡೂ ಸೇರಿದಂತೆ)

ಉಪಾಧ್ಯಕ್ಷಿಣಿಯವರು: ಪ್ರಸ್ತಾವ ಏನೆಂದರೆ " ಖಂಡ 11ರಿಂದ 19 ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 11 ರಿಂದ 19 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

AMENDMENT TO CLAUSE 20

MADAM DEPUTY SPEAKER : Sri Qumaral Islam has given a notice of an amendment to Clause 20.

SRI QAMARAL ISLAM : I don't move the amendment.

(The amendment , was by leave, withdrawn)

ಖಂಡ 20 ರಿಂದ 27 ರವರೆಗೆ ಎರಡೂ ಸೇರಿದಂತೆ)

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನಂದರೆ 'ಖಂಡ 20 ರಿಂದ 27 ರವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ'

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 20 ರಿಂದ 27 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ " ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : (ಯೋಜನೆ, ಪ್ರಾಂಶ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) ಮಾನ್ಯ ಉಪಾಧ್ಯಕ್ಷಿಣಿಯವರೇ 1991ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ "1991ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು 1991ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವಿಧೇಯಕಕ್ಕೆ ತಿದ್ದುಪಡಿಯಾಗಿರುವ ರೂಪದಲ್ಲಿ ಒಪ್ಪಿಗೆ ನೀಡಲಾಯಿತು.

ಪ್ರಕಟಣೆ

ಮಾನ್ಯ ಉಪಾಧ್ಯಕ್ಷಿಣಿಯವರು;

ಈ ದಿನ ಈ ಕೆಳಕಂಡ ವ್ಯಕ್ತಿಗಳು ಪ್ರೇಕ್ಷಕರ ವೇದಿಕೆಯಿಂದ ಘೋಷಣೆ ಕೂಗಿ ಕರಪತ್ರಗಳನ್ನು ಎಸೆದಿರುತ್ತಾರೆ.

ಶ್ರೀಯುತರುಗಳಾದ

1) ಮೋಹನ್, 22 ವರ್ಷ

2) ರಾಜು, 22 ವರ್ಷ

3) ಶಿವರಾಜು, 23 ವರ್ಷ

ಈ ಮೇಲ್ಕಂಡ ವ್ಯಕ್ತಿಗಳು ಪ್ರೇಕ್ಷಕರ ವೇದಿಕೆಯಲ್ಲಿ ಅವಿವೇಕ ವರ್ತನೆಯಿಂದ ಘೋಷಣೆಯನ್ನು ಕೂಗುತ್ತಾ ಕರಪತ್ರಗಳನ್ನು ಎಸೆದಿದ್ದಕ್ಕಾಗಿ ಪಹರೆ ಮತ್ತು ನಿಗಾವಣೆ ಸಿಬ್ಬಂದಿಯವರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಈ ವ್ಯಕ್ತಿಗಳಿಗೆ ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ವೆಂಕಟೇಶ್ ಹಾಗೂ ಶ್ರೀ ಎಂ.ಪಿ. ಕೇಶವಮೂರ್ತಿಯವರುಗಳು